# ನಾವು ಸುಳ್ಳನ್ನು ಪ್ರೀತಿಸುತ್ತೇವೆ!

ಈ ಮಾತು ಅಕ್ಷರಶಃ ಸತ್ಯ! ಈ ಮಾತನ್ನು ಈಗ ಯಾರೂ ಹೊಸತಾಗಿ ಹೇಳುತ್ತಿಲ್ಲ. ಮನುಷ್ಯನಿಗೆ ಜ್ಞಾನವೆಂಬುದು ಅನುಭವ ಜನ್ಯವಾದಾಗಿನಿಂದಲೂ ತಿಳಿದವರೆನ್ನಿಸಿಕೊಂಡವರು ಹೇಳಿಕೊಂಡು ಬರುತ್ತಿರುವ ಮಾತು. ಅಂಥ ಅನುಭವ ಕಂಡುಂಡ ಸಂತ ಸಜ್ಜನರು ಕೂಡ ಸುಳ್ಳನ್ನು ಪ್ರೀತಿಸುವುದರಿಂದ ಸಂಪೂರ್ಣ ದೂರವಿದ್ದರು ಎಂದು ಹೇಳಲಾಗದು. ಬಹಿರಂಗವಾಗಿ ಅದನ್ನು ನಿರಾಕರಿಸಿದಂತೆ ನಟಿಸಿದರೂ ಅಂತರಂಗದಲ್ಲಿ ಅದರ ಮೋಹದ ಮೋಡಿಗೆ ಕ್ವಚಿತ್ತಾದರೂ, ಕೆಲವು ಕ್ಷಣವಾದರೂ ಒಳಗಾಗಿದ್ದರೆ ಆಶ್ಚರ್ಯವಿಲ್ಲ. ಏಕೆಂದರೆ ತನ್ನಲ್ಲಿಲ್ಲದ, ಆದರೆ ತಾನು ಅಪರೂಪವೆಂದೂ ಅಸಾಧ್ಯ ಸಾಧಕವೆಂದೂ ಭಾವಿಸುವ ಗುಣವೊಂದನ್ನು ತಮ್ಮಲ್ಲಿದೆಯೆಂದು ತಮ್ಮೆದುರಿಗೆ ಅಥವಾ ಇತರರೆದುರಿಗೆ ಬೇರೆಯವರು ಬಣ್ಣಿಸಿದಾಗ ಮನಸ್ಸು ಖುಷಿಯಿಂದ ತುಸು ಅರಳುತ್ತದೆ. ಆದರೆ ಆ ವ್ಯಕ್ತಿ ಚಿಂತಕನೂ ವಿವೇಚನಾ ಶಕ್ತಿಯುಳ್ಳವನೂ ಆಗಿದ್ದವನಾದರೆ ಆತ್ಮಶೋಧನೆಗೆ ತೊಡಗಿ ಎಚ್ಚೆತ್ತುಕೊಳ್ಳುತ್ತಾನೆ. ಸಾಮಾನ್ಯ ನಾದರೆ ಅದನ್ನೇ ಸತ್ಯವೆಂದು ತಿಳಿದು ಅಧಃಪತನದ ಹಾದಿ ಹಿಡಿಯುತ್ತಾನೆ.

ವ್ಯಕ್ತಿತ್ವ ಪೊಳ್ಳಾದಷ್ಟೂ ಸುಳ್ಳು ಮತ್ತು ಅದು ಸೃಷ್ಟಿಸುವ ಪ್ರಪಂಚ ನಮಗೆ ಪ್ರಿಯವಾಗುತ್ತದೆ. ನಮ್ಮನ್ನು ಸದಾ ಹೊಗಳುವವರ ಒಂದು ವೃತ್ತವನ್ನು ನಮ್ಮ ಸುತ್ತ ನಿರ್ಮಿಸಿಕೊಳ್ಳುತ್ತೇವೆ. ಅಂಥವರು ನಮ್ಮ ಆತ್ಮೀಯರಾಗಿತ್ತಾರೆ; ಅಂಥವರಿಗೆ ನಾವು ಶಕ್ತಿಮೀರಿ ಸಹಾಯ ಮಾಡುತ್ತೇವೆ. ಅವರು ಸುಖವಾಗಿರುವಂತೆ ನೋಡಿಕೊಳ್ಳುತ್ತೇವೆ. ಅವರ ಅಂತರಂಗದ ಮರ್ಮವನ್ನು ಅರಿಯಲು ವಿಫಲರಾಗುತ್ತೇವೆ. ಅಂಥವರು ಅಧಿಕಾರ-ಹಣ- ಅಂತಸ್ತುಗಳನ್ನು ನೋಡಿ ತಮ್ಮ ನಿಷ್ಠೆಯನ್ನು ಬದಲಿಸುತ್ತಾರೆಂಬ ಲೋಕಸತ್ಯವನ್ನು ಅರಿಯಲು ವಿಫಲರಾಗುತ್ತೇವೆ. ಅವರು ಸರಿಯಾದ ಸಂದರ್ಭದಲ್ಲಿ- ಕೈ ಕೊಟ್ಟಾಗ ವಿಹ್ವಲರಾಗುತ್ತೇವೆ; ಸಿಡಿಮಿಡಿಗೊಂಡು ಲೋಕವೇ ದ್ರೋಹಿಗಳಿಂದ ತುಂಬಿದೆಯೆಂದು ಕೋಪಗೊಳ್ಳುತ್ತೇವೆ. ಏಕೆಂದರೆ ನಾವು ಸತ್ಯವನ್ನು ಅರಿಯಲು ವಿಫಲಗೊಂಡಿರುತ್ತೇವೆ. ಈ ಕಹಿ ಸತ್ಯವನ್ನು ಒಪ್ಪಿಕೊಳ್ಳಲು ಮನಸ್ಸು ಹಿಂಜರಿಯುತ್ತದೆ. ನಮ್ಮ ಮನಸ್ಸು ಮುಂಚಿನಿಂದ ಸರಿಯಾದ ವಿವೇಕ- ಗ್ರಹಿಕೆಗಳಿಂದ ಹದಗೊಂಡು ವಿಕಾಸಗೊಂಡಿರುವುದಿಲ್ಲ.

ನಮ್ಮ ಮನೆಗಳಲ್ಲೂ ಅಷ್ಟೆ. ನಿಷ್ಠುರವಾಗಿ ನೈತಿಕ ನಿಯಮಗಳನ್ನೂ ಕೌಟುಂಬಿಕ ಮೌಲ್ಯಗಳನ್ನೂ ಸತ್ಯಮಾರ್ಗದಲ್ಲಿ ಸಂಪಾದಿಸಿ ಕೈಬಾಯಿ ಶುದ್ಧವಾಗಿಟ್ಟುಕೊಂಡಿರುವ ಸದಸ್ಯರನ್ನು ಕೆಲಸಕ್ಕೆ ಬಾರದವರೆಂದೂ ಬದುಕು ಮಾಡಲು ಬಾರದವರೆಂದೂ ನಿರ್ಧರಿಸಿಬಿಡುತ್ತೇವೆ. ಅದೇ ಚುರುಕಾಗಿ ಹಣ ಸಂಪಾದನೆ ಮಾಡುವ, ಅಡ್ಡ ಮಾರ್ಗದಲ್ಲಿ ಬದುಕು ನಿರ್ವಹಿಸುವ, ಸದಾ ಇತರ ಸದಸ್ಯರ ಮೇಲೆ ಚಾಡಿ ಹೇಳುವವರನ್ನು ನಾವು ಮೆಚ್ಚುತ್ತೇವೆ. ಇಂಥವರನ್ನು ಬದುಕು ಮಾಡುತ್ತಾರೆಂದೂ ಮನೆತನವನ್ನು ಬೆಳೆಸುತ್ತಾರೆಂದೂ ತೃಪ್ತಿಪಡುತ್ತೇವೆ. ಇವರು ನಮ್ಮ ಅಂತರಂಗದ ಕೂಟದ ಸದಸ್ಯರಾಗುತ್ತಾರೆ. ಈ ಪ್ರವೃತ್ತಿ ನಾವು ಕೆಲಸ ಮಾಡುವ ಕೆಲಸದ ತಾಣಗಳಲ್ಲೂ ಅನುರಣಿತವಾಗುತ್ತದೆ. ಇಂಥವರಿಂದ ನಮ್ಮ ಸ್ವಾರ್ಥ ಸಾಧನೆ ಸುಗಮವಾಗುತ್ತದೆ. ಇಂಥವರು ನಾವು ಸಾರ್ವಜನಿಕವಾಗಿ ಅಥವಾ ವೈಯಕ್ತಿಕ ನೆಲೆಗಳಲ್ಲಿ ಮಾಡಲಾಗದ, ಆದರೆ ನಮಗೆ ಅಗತ್ಯ ಆಗಬೇಕಾದ ಅನೈತಿಕ ಮಾರ್ಗದ ಕೆಲಸಗಳನ್ನು ಮಾಡಿಕೊಡುತ್ತಾರೆ. ನಮ್ಮ ಮುಂದೆ ಅವರು ಭ್ರಮೆಯ ಸೌಧವನ್ನು ನಿರ್ಮಿಸುತ್ತಾರೆ. ಅದರ ತುದಿಯ ಮೇಲೆ ಕೂರಿಸಿ ಹಾಡಿ ಹೊಗಳುತ್ತಾರೆ. ನಾವು ಸಂತೋಷದಿಂದ ಬೀಗುತ್ತೇವೆ; ಹುಸಿ ಸುಖದಲ್ಲಿ ಮುಳುಗಿ ತೇಲುತ್ತೇವೆ, ತೇಗುತ್ತೇವೆ. ಮುಂದೊಂದು ದಿನ ನಾವು ಮತ್ತು ನಮ್ಮ ಹುಸಿ ಸಮಾನ ಮನಸ್ಕರು ಸೇರಿ ನಿರ್ಮಿಸಿರುವ ಭ್ರಮಾ ಸೌಧ ಕುಸಿದು ಅದರ ಸಮೇತ ನಾವು ನಾಶವಾಗುತ್ತೇವೆ ಎಂಬ ಕಟು ಸತ್ಯವನ್ನು ಆ ಸಂದರ್ಭದಲ್ಲಿ ಅರಿಯಲು ವಿಫಲರಾಗುತ್ತೇವೆ. ಇದು ಜೀವನದ ವ್ಯಂಗ್ಯ!

ನಾವೆಂಥ ದಡ್ಡರೆಂಬುದು ನಮಗೆ ಚೆನ್ನಾಗಿಯೇ ತಿಳಿದಿರುತ್ತದೆ. ನಾವು ಓದುವ, ಕೇಳುವ ಅನೇಕ ಜಾಹೀರಾತುಗಳು ಸುಳ್ಳಿನ ಮುದ್ದೆಗಳೆಂದು ನಾವು ಅರಿತಿರುತ್ತೇವೆ. ಆದರೂ ನಮ್ಮೊಳಗಿರುವ ಅದ್ಯಾವುದೋ ಅವ್ಯಕ್ತ ಆಸೆ ಆ ಸುಳ್ಳುಗಳನ್ನು ನಂಬುವಂತೆ ಪ್ರೇರೇಪಿಸುತ್ತದೆ. ಆ ಸುಳ್ಳಿಗೆ ನಾವು ಮರುಳಾಗುತ್ತೇವೆ. ನಿಮ್ಮ ಬೋಡುತಲೆಗೆ ಈ ಔಷಧಿ ಬಳಸಿದರೆ ಕೂದಲು ಬರುತ್ತದೆ; ಈ ಶಕ್ತಿವರ್ಧಕದಿಂದ ನೀವು ತೆಳ್ಳಗಾಗುತ್ತೀರಿ/ ದಪ್ಪಗಾಗುತ್ತೀರಿ; ಈ ಔಷಧಿಯಿಂದ ನಿಮ್ಮ ಪುರುಷತ್ವ ವೃದ್ಧಿಯಾಗುತ್ತದೆ; ಈ ಔಷಧಿಯಿಂದ ನೀವು ಎತ್ತರವಾಗುತ್ತೀರಿ... ಇತ್ಯಾದಿ ಇತ್ಯಾದಿ ಸುಳ್ಳಿನ ಮಾತುಗಳು ನಮಗೆ ಪ್ರಿಯವಾಗುತ್ತವೆ. ಭಾರತೀಯರಿಗಂತು ಬೆಳ್ಳಗಾಗುವ ಕ್ರೀಮುಗಳೆಂದರೆ ಆಸೆಯಿಂದ ತೇಲುವಂತಾಗುತ್ತದೆ.

ಹೌದಲ್ಲವೆ? ನಮಗೆ ಸುಳ್ಳೆಂದರೆ ಪ್ರಿಯವಲ್ಲವೆ?

**-ಶಿಕಾಕು**

## ಮಾತೇ ಮುತ್ತು

★ ಶಾರೀರಿಕ ಉಪವಾಸದ ಜೊತೆಗೆ ಮನಸ್ಸಿನ ಉಪವಾಸ ಇರದಿದ್ದರೆ, ಅದು ಅಹಂಕಾರದ್ದು ಹಾಗೂ ಹಾನಿಕರವಾದದ್ದು.

-ಮಹಾತ್ಮ ಗಾಂಧೀಜಿ

★ ಈ ಜಗತ್ತಿನಲ್ಲಿ ಎಲ್ಲ ಪದಾರ್ಥಗಳೂ ಸುಲಭ. ಆದರೆ ಕೆಲಸ ಮಾಡದೆ ಇರುವ ಜನರಿಗೆ ಅದು ಲಭ್ಯವಿಲ್ಲ.

-ತುಲಸಿದಾಸ

★ ಚಾರಿತ್ರ್ಯ ಒಂದು ವಜ್ರ ಇದ್ದಂತೆ- ಎಲ್ಲಾ ಕಲ್ಲುಗಳನ್ನು ಕತ್ತರಿಸುವ ಶಕ್ತಿ ಅದಕ್ಕಿದೆ.

-ಮದರ್ ತೆರೇಸಾ

★ ನದಿ ಎಂದಾದರೂ ತನ್ನ ನೊರೆಯ ಮೇಲೆ ಗಮನ ಹರಿಸುತ್ತದೆಯೇ? ಕೀರ್ತಿ ಜೀವನವೆಂಬ ನದಿಯು ನೊರೆ ಇದ್ದಂತೆ.

-ರವೀಂದ್ರನಾಥ ಠಾಗೂರ್

★ ಸೌಂದರ್ಯ, ಚೆಲುವುಗಳಿಗಿಂತ ಗುಣವೇ ಯೋಗ್ಯವಾದದ್ದು.

-ಸ್ಮಿತ್

★ ನಮ್ಮ ವ್ಯಕ್ತಿಗತ ಸ್ವಾರ್ಥ ತುಂಬಿದ ಇಚ್ಛೆಗಳು ಹಾಗೂ ಕ್ರಿಯಾ ಕಲಾಪಗಳಿಂದ ಮುಕ್ತರಾಗು ವುದೇ ನಿಜವಾದ ಉಪವಾಸದ ಅರ್ಥ.

-ಸ್ವಾಮಿ ರಾಮತೀರ್ಥರು

★ ಸಾಧ್ಯವಾಗಬಹುದಾದುದರ ಕಲೆಯೇ 'ರಾಜಕೀಯ.'

-ಸಿ.ಕೆ.ಆಲನ್

★ ವಕೀಲರನ್ನು ಕಂಡರೆ ಇಷ್ಟವೇ? ಹಾಗಾದರೆ ಶ್ರೀಮಂತಿಕೆ ಉಳಿಯದು.

-ರಷ್ಯಾ ಗಾದೆ

★ ಸ್ವದೇಶವನ್ನು ಪ್ರೀತಿಸದಷ್ಟು ನೀಚರು ಯಾರಿದ್ದಾರೆ?

-ಶೇಕ್ಸ್‌ಪಿಯರ್

★ ಮನ ನೋಯಿಸುವ ದಾನಕ್ಕಿಂತ ಒಂದು ಸವಿನುಡಿ ಮತ್ತು ಕ್ಷಮಾ ಗುಣವೇ ಉತ್ತಮ.

-ಕುರಾನ್

★ ಮನುಷ್ಯನಿಗೆ ಕಾಣುವುದಕ್ಕಿಂತ ಹೆಚ್ಚು ಸಂತೋಷ ಲೋಕದಲ್ಲಿದೆ.

-ನೀಟ್ಷೆ

★ ಸಂಸಾರವೆನ್ನುವುದು ಬಹುದೊಡ್ಡ ಸರ್ಕಸ್ಸು, ಇದ ನಡೆಸುವುದೆ ತಪಸ್ಸು.

-ಎಸ್.ವಿ.ಪರಮೇಶ್ವರ ಭಟ್ಟ

★ ಗಂಡು ಕಾಲಿನ ಕೆಳಗೆ ಸಿಕ್ಕು ಹೆಣವಾದರೂ, ಜೀವನದಿಯಾಗಿ ಹರಿದವಳು ಹೆಣ್ಣು.

-ಚಂದ್ರಶೇಖರ ಪಾಟೀಲ

★ ಈ ಪ್ರಪಂಚದಲ್ಲಿ ಶಕ್ತಿಶಾಲಿ ವಸ್ತುಗಳೆಂದರೆ ಕತ್ತಿ ಮತ್ತು ಲೇಖನಿ. ಆದರೆ ಕೊನೆಯಲ್ಲಿ ಗೆಲ್ಲುವುದು ಲೇಖನಿಯೇ.

-ನೆಪೋಲಿಯನ್

★ ನಿನ್ನ ಸುಖವನ್ನು ಇತರರೊಡನೆ ಹಂಚಿಕೊಳ್ಳಬಹುದು; ಆದರೆ ನಿನ್ನ ದುಃಖ ಪೂರ್ತಿ ನಿನ್ನದೇ.

-ಗಾದೆ